# ಅಂಗನವಾಡಿ: ಅರ್ಜಿ ಆಹ್ವಾನ

ಉತ್ತರಕನ್ನಡ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ವಿವಿಧ ಕಾರಣಗಳಿಂದಾಗಿ ಖಾಲಿಯಾಗಿರುವ ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಮಹಿಳೆಯರು karnemakaone.kar.nic.in/abcd/ ಮೂಲಕ ಏ.4ರೊಳಗಾಗಿ ಅರ್ಜಿ ಸಲ್ಲಿಸಬಹುದು. ಅಂಕೋಲಾ ತಾಲೂಕಿನಲ್ಲಿ ನಾಲ್ಕು ಅಂಗನವಾಡಿ ಕಾರ್ಯಕರ್ತೆ ಹಾಗೂ 21 ಸಹಾಯಕಿ, ಭಟ್ಕಳದಲ್ಲಿ ಒಂಬತ್ತು ಅಂಗನವಾಡಿ ಕಾರ್ಯಕರ್ತೆ, 21 ಸಹಾಯಕಿ, ದಾಂಡೇಲಿಯಲ್ಲಿ ನಾಲ್ಕು ಅಂಗನವಾಡಿ ಕಾರ್ಯಕರ್ತೆ ಹಾಗೂ 16 ಸಹಾಯಕಿ, ಹೊನ್ನಾವರದಲ್ಲಿ ನಾಲ್ಕು ಅಂಗನವಾಡಿ ಕಾರ್ಯಕರ್ತೆ, 44 ಸಹಾಯಕಿ, ಕಾರವಾರದಲ್ಲಿ ಮೂರು ಅಂಗನವಾಡಿ ಕಾರ್ಯಕರ್ತೆ ಹಾಗೂ 17 ಸಹಾಯಕಿ 17, ಕುಮಟಾದಲ್ಲಿ ಐದು ಅಂಗನವಾಡಿ ಕಾರ್ಯಕರ್ತೆ ಹಾಗೂ 37 ಸಹಾಯಕಿ, ಮುಂಡಗೋಡದಲ್ಲಿ ಒಂಬತ್ತು ಅಂಗನವಾಡಿ ಕಾರ್ಯಕರ್ತೆ ಹಾಗೂ 39 ಸಹಾಯಕಿ, ಸಿದ್ದಾಪುರದಲ್ಲಿ 12 ಅಂಗನವಾಡಿ ಕಾರ್ಯಕರ್ತೆ ಹಾಗೂ 32 ಸಹಾಯಕಿ, ಶಿರಸಿಯಲ್ಲಿ 24 ಅಂಗನವಾಡಿ ಕಾರ್ಯಕರ್ತೆ ಹಾಗೂ 69 ಸಹಾಯಕಿ, ಜೋಯಿಡಾದಲ್ಲಿ 20 ಅಂಗನವಾಡಿ ಕಾರ್ಯಕರ್ತೆ ಹಾಗೂ 34 ಸಹಾಯಕಿ, ಯಲ್ಲಾಪುರದಲ್ಲಿ ಎಂಟು ಅಂಗನವಾಡಿ ಕಾರ್ಯಕರ್ತೆ ಹಾಗೂ 23 ಸಹಾಯಕಿ, ಹಳಿಯಾಳದಲ್ಲಿ 13 ಅಂಗನವಾಡಿ ಕಾರ್ಯಕರ್ತೆ ಹಾಗೂ 23 ಸಹಾಯಕಿ ಹುದ್ದೆಗಳು ಖಾಲಿ ಇದ್ದು ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.